**ದಿನಾಂಕಃ 09.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದಃ**

9. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಕ್ರಯಪತ್ರದ ಚಕ್ಕುಬಂದಿ ಪೂರ್ವಕ್ಕೆ ಪುಟ್ಟಸ್ವಾಮಣ್ಣ, ಪಶ್ಚಿಮಕ್ಕೆ ದಾಸಪ್ಪ, ಉತ್ತರಕ್ಕೆ ನಂಜಪ್ಪ ಮತ್ತು ದಕ್ಷಿಣಕ್ಕೆ ವೆಂಕಟರಮಣಪ್ಪ ರವರು ಇರುತ್ತಾರೆ. ನಾನು ಹಾಜರುಪಡಿಸಿರುವ ಕ್ರಯಪತ್ರದಲ್ಲಿ ಈ ರೀತಿ ಚಕ್ಕುಬಂದಿ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಕ್ರಯಪತ್ರದಲ್ಲಿ ಪೂರ್ವಕ್ಕೆ ರಾಮಯ್ಯ ರವರ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ವೆಂಕಟಮ್ಮ ರವರ ಜಮೀನು ಎಂದರೆ ಸರಿ. ಉತ್ತರಕ್ಕೆ ನಂಜಪ್ಪ ರವರ ಸ್ವತ್ತು ಎಂದರೆ ಸರಿ ಮತ್ತು ದಕ್ಷಿಣಕ್ಕೆ ವೆಂಕಟರಮಣಪ್ಪ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ಪೂರ್ವಕ್ಕೆತೋರಿಸಿರುವ ರಾಮಯ್ಯ ರವರು 1ನೇ ಪ್ರತಿವಾದಿಯ ಗಂಡ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಸುಮಾರು 10ವರ್ಷಗಳಿಂದ ಅವರ ಸ್ವತ್ತಿಗೆ ಕಲ್ಲುಕಂಬ ಹಾಕಿರುತ್ತಾರೆಂದರೆ ನನಗೆ ಗೂತ್ತಿಲ್ಲ. ಕಲ್ಲುಕಂಬ ಹಾಕುವ ಸಂಧರ್ಭದಲ್ಲಿ ನಾನು ಕೂಡ ಹಾಜರಿದ್ದೆ ಎಂದರೆ ನನಗೆ ಗೊತ್ತಿಲ್ಲ. ಗಂಗಮ್ಮ ರವರ ಸ್ವತ್ತು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

10. 1ನೇ ಪ್ರತಿವಾದಿಯು ತಮ್ಮ ಜಾಗೆಯಲ್ಲಿ ಮುಂದೆ ವಾಸದ ಮನೆ ಹಾಗೂ ಹಿಂದೆ ರೇಷ್ಮೆ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಈಗ ಕಟ್ಟಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ದಾವಾಸ್ವತ್ತಿನಲ್ಲಿ ನಾವು ಮನೆ ಕಟ್ಟಿರುವುದಿಲ್ಲ ಎಂದರೆ ಸರಿ. ನಾನು ಪ್ರತಿವಾದಿಗಳ ವಿರುದ್ದ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ದಿನಾಂಕ.25.04.2023ರಲ್ಲಿ ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ಆಗ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ನಂತರ ಪ್ರತಿವಾದಿಗಳು ತಮ್ಮ ಸ್ವಾಧೀನದಲ್ಲಿ ಇದ್ದುದ್ದಾಗಿ ಸುಳ್ಳು ದೂರನ್ನು ನಾನು ಕೊಟ್ಟಿರುವುದಾಗಿ ನನ್ನನ್ನು ಬೈದಿರುತ್ತಾರೆ ಎಂದರೆ ಸರಿಯಲ್ಲ. ನಾನು ಕೊಟ್ಟ ದೂರಿನಲ್ಲಿ ಪ್ರತಿವಾದಿಗಳು ನಮ್ಮ ಮೇಲೆ ಜಗಳಕ್ಕೆ ಬರುತ್ತಾರೆ ಎಂಬುದಾಗಿ ಅವರು ನಮ್ಮ ತಂಟೆಗೆ ಬರಬಾರದು ಎಂದು ಹೇಳಿ ನಿವೇದಿಸಿಕೊಂಡಿರುತ್ತೇನೆ ಎಂದರೆ ಸರಿ.

ದೂರಿನಲ್ಲಿ ಪ್ರತಿವಾದಿಗಳು ದಾವಾಸ್ವತ್ತಿನ ಮೇಲೆ ಒತ್ತುವರಿ ಮಾಡುತ್ತಿದ್ದಾರೆಂದು ಹೇಳಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಗಳು ಒತ್ತುವರಿ ಮಾಡಲು ಪ್ರಯತ್ನ ಮಾಡುತ್ತಿರುವುದಾಗಿ ನಾನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಗಳು ನಮ್ಮ ಜಾಗೆಯನ್ನು ಒತ್ತುವರಿ ಮಾಡಿರುವುದಿಲ್ಲ ಹಾಗೂ ಮಾಡುವ ಪ್ರಯತ್ನ ಕೂಡಾ ಮಾಡಿರುವುದಿಲ್ಲ, ಅವರು ತಮ್ಮ ಸ್ವಾಧೀನದ ಸ್ವತ್ತಿನಲ್ಲಿ ಇದ್ದರು ಸಹಿತ ಅವರ ವಿರುದ್ದ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

11. ನಾನು ಖರೀದಿ ಮಾಡಿದ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಅದರಂತೆ ಪ್ರತಿವಾದಿಗಳು ಅವರು ಖರೀದಿಸಿದ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನಾನು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ಸ್ವತ್ತಿನಲ್ಲಿ ಮನೆಕಟ್ಟಿಕೊಂಡು ಮುಂಚಿನಿಂದಲ್ಲೂ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಯಾವ ಸ್ವತ್ತಿನಲ್ಲಿ ಎಂದು ನನಗೆ ಗೊತ್ತಿಲ್ಲ ಆದರೆ ವಾಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ವಿರುದ್ದ ಒಂದು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**